# ವಿದ್ಯಾರ್ಥಿಗಳಿಗೆ ಕೈಗಾರಿಕಾ ತಂತ್ರಜ್ಞಾನ ಮಾಹಿತಿ



**ಕೊಂಕಣವಾಹಿನಿ ನ್ಯೂಸ್,**
**ಹಳಿಯಾಳ :** ಇಲ್ಲಿನ ಕೆಎಲ್ಎಸ್ ವಿಡಿಐಟಿ ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಇತ್ತೀಚೆಗೆ ಕೈಗಾರಿಕಾ ಸಂಸ್ಥೆಗಳಿಗೆ ಭೇಟಿ ನೀಡಿದ್ದರು.

ಡಾ. ಗುರುರಾಜ್ ಹತ್ತಿ ಮತ್ತು ಪ್ರೊ. ಗುರುನಾಥ ಮೇವುಂಡಿ ಅವರೊಂದಿಗೆ 7ನೇ ಸೆಮಿಸ್ಟರ್ ನ 25 ಕ್ಕೂ ಅಧಿಕ ವಿದ್ಯಾರ್ಥಿಗಳು ಧಾರವಾಡದ ವಿಜಯಲಕ್ಷ್ಮಿ ಗೇರ್ಸ್ ಸಂಸ್ಥೆಗೆ ಭೇಟಿ ನೀಡಿದ್ದರು. ಈ ಸಂಸ್ಥೆಯ ಕಾರ್ಯ ನಿರ್ವಾಹಕರಾದ ಸತೀಶ್ ನಾಡಿಗೇರ್ ವಿದ್ಯಾರ್ಥಿಗಳಿಗೆ ಡೀಸೆಲ್ ಜನರೇಟರ್ ಉತ್ಪಾದನೆ ಹಾಗೂ ದುರಸ್ತಿಯ ಕುರಿತಾಗಿ ವಿವರಣೆ ನೀಡಿದರು. ಉತ್ಪಾದನಾ ಹಂತದಲ್ಲಿ ತಮ್ಮ ಸಂಸ್ಥೆಯಲ್ಲಿ ಬಳಸಲಾಗುತ್ತಿರುವ ನೂತನ ಉಪಕರಣಗಳ ಕುರಿತಾಗಿ ಮಾಹಿತಿ ನೀಡಿದರು. ಮೋಟಾರ್ ಹಾಗೂ ಜನರೇಟರ್ ನ ದುರಸ್ತಿಯ ಕುರಿತಾಗಿಯೂ ತಿಳಿಸಿದರು. ದ್ವಿತೀಯ ವರ್ಷದ 40ಕ್ಕೂ ಅಧಿಕ ವಿದ್ಯಾರ್ಥಿಗಳು ಡಾ. ಅನಂತ ಜೋಶಿ ಮತ್ತು ಪ್ರೊ. ಗುರುರಾಜ ಸತ್ತಿಗೇರಿ ಅವರೊಂದಿಗೆ ಅಕ್ಟೋಬರ್ 11ರಂದು ಧಾರವಾಡದ ಮೈಕಾನ್ ಇಂಜಿನಿಯರ್ಸ್ ಪ್ರೈ ಲಿ. ಗೆ ಭೇಟಿ ನೀಡಿದ್ದರು. ಮೈಕಾನ್ ಇಂಜಿನಿಯರ್ಸ್ ನ ಅಧಿಕಾರಿಗಳಾದ ಇಮ್ರಾನ್ ಖಾನ್ ಜಿ, ಮೈನು ನಾಯಕ್ವಾಡಿ ಕೈಗಾರಿಕಾ ಕ್ಷೇತ್ರದಲ್ಲಿ ಬಳಸುತ್ತಿರುವ ವಾಲ್ವಗಳ ಉತ್ಪಾದನೆ, ಜೋಡಣೆ ಹಾಗೂ ದುರಸ್ತಿ ಕುರಿತಾಗಿ ಮಾಹಿತಿ ನೀಡಿದರು. ತಮ್ಮ ಸಂಸ್ಥೆಯಲ್ಲಿ ವಾಲ್ವಗಳ ಉತ್ಪಾದನೆಗೆ ಬಳಸಲಾಗುತ್ತಿರುವ ನೂತನ ತಂತ್ರಜ್ಞಾನಗಳ ಕುರಿತಾಗಿ ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ಕಾರ್ಯಕ್ರಮವನ್ನು ವಿಭಾಗ ಮುಖ್ಯಸ್ಥ ಡಾ. ಕೆ ಎಸ್ ಪೂಜಾರ್ ಆಯೋಜಿಸಿದ್ದರು. ವಿದ್ಯಾರ್ಥಿಗಳಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಆಗುತ್ತಿರುವ ನೂತನ ಬದಲಾವಣೆಗಳನ್ನು ತಿಳಿಯಲು ಈ ಕೈಗಾರಿಕಾ ಭೇಟಿಯನ್ನು ಆಯೋಜಿಸಲಾಗಿತ್ತು ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಿಳಿಸಿದ್ದಾರೆ.

# ವಿಡಿಐಟಿ ವಿದ್ಯಾರ್ಥಿಗಳ ಕೈಗಾರಿಕಾ ಭೇಟಿ



**ಹಳಿಯಾಳ :** ಇಲ್ಲಿಯ ಕೆಎಲ್ಎಸ್ ವಿಡಿಐಟಿ ಹಳಿಯಾಳದ ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಇತ್ತೀಚೆಗೆ ಕೈಗಾರಿಕಾ ಸಂಸ್ಥೆಗಳಿಗೆ ಭೇಟಿ ನೀಡಿದ್ದರು. ಡಾ. ಗುರುರಾಜ್ ಹತ್ತಿ ಮತ್ತು ಪ್ರೊ. ಗುರುನಾಥ ಮೇವುಂಡಿ ಅವರೊಂದಿಗೆ 7ನೇ ಸೆಮಿಸ್ಟರ್‌ನ 25ಕ್ಕೂ ಅಧಿಕ ವಿದ್ಯಾರ್ಥಿಗಳು ಧಾರವಾಡದ ವಿಜಯಲಕ್ಷ್ಮಿ ಗೇರ್ಸ್ ಸಂಸ್ಥೆಗೆ ಭೇಟಿ ನೀಡಿದ್ದರು. ಈ ಸಂಸ್ಥೆಯ ಕಾರ್ಯನಿರ್ವಾಹಕ ಸತೀಶ್ ನಾಡಿಗೇರ್ ವಿದ್ಯಾರ್ಥಿಗಳಿಗೆ ಡೀಸೆಲ್ ಜನರೇಟರ್ ಉತ್ಪಾದನೆ ಹಾಗೂ ದುರಸ್ತಿಯ ಕುರಿತಾಗಿ ವಿವರಣೆ ನೀಡಿದರು. ಉತ್ಪಾದನಾ ಹಂತದಲ್ಲಿ ತಮ್ಮ ಸಂಸ್ಥೆಯಲ್ಲಿ ಬಳಸಲಾಗುತ್ತಿರುವ ನೂತನ ಉಪಕರಣಗಳ ಕುರಿತಾಗಿ ಮಾಹಿತಿ ನೀಡಿದರು. ಮೋಟಾರ್ ಹಾಗೂ ಜನರೇಟರ್‌ನ ದುರಸ್ತಿಯ ಕುರಿತಾಗಿಯೂ ತಿಳಿಸಿದರು. ದ್ವಿತೀಯ ವರ್ಷದ 40ಕ್ಕೂ ಅಧಿಕ ವಿದ್ಯಾರ್ಥಿಗಳು ಡಾ. ಅನಂತ ಜೋಶಿ ಮತ್ತು ಪ್ರೊ. ಗುರುರಾಜ ಸತ್ತಿಗೇರಿ ಅವರೊಂದಿಗೆ ಅ.11ರಂದು ಧಾರವಾಡದ ಮೈಕಾನ್ ಇಂಜಿನಿಯರ್ಸ್ ಪ್ರೈ. ಲಿ. ಗೆ ಭೇಟಿ ನೀಡಿದ್ದರು. ಮೈಕಾನ್ ಇಂಜಿನಿಯರ್ಸ್‌ನ ಅಧಿಕಾರಿಗಳಾದ ಇಮ್ರಾನ್‌ಖಾನ್ ಜಿ., ಮೈನು ನಾಯಕ್ವಾಡಿ ಕೈಗಾರಿಕಾ ಕ್ಷೇತ್ರದಲ್ಲಿ ಬಳಸುತ್ತಿರುವ ವಾಲ್ವಗಳ ಉತ್ಪಾದನೆ, ಜೋಡಣೆ ಹಾಗೂ ದುರಸ್ತಿ ಕುರಿತಾಗಿ ಮಾಹಿತಿ ನೀಡಿದರು. ತಮ್ಮ ಸಂಸ್ಥೆಯಲ್ಲಿ ವಾಲ್ವಗಳ ಉತ್ಪಾದನೆಗೆ ಬಳಸಲಾಗುತ್ತಿರುವ ನೂತನ ತಂತ್ರಜ್ಞಾನಗಳ ಕುರಿತಾಗಿ ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ಕಾರ್ಯಕ್ರಮವನ್ನು ವಿಭಾಗ ಮುಖ್ಯಸ್ಥ ಡಾ. ಕೆ. ಎಸ್. ಪೂಜಾರ್ ಆಯೋಜಿಸಿದ್ದರು. ವಿದ್ಯಾರ್ಥಿಗಳಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಆಗುತ್ತಿರುವ ನೂತನ ಬದಲಾವಣೆಗಳನ್ನು ತಿಳಿಯಲು ಈ ಕೈಗಾರಿಕಾ ಭೇಟಿಯನ್ನು ಆಯೋಜಿಸಲಾಗಿತ್ತು ಎಂದು ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.